# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343 ಇ-ಮೇಲ್ ವಿಳಾಸ : director.ahr.kptcl@gmail.com


**ಸಂಖ್ಯೆ: KPTCL/GMT/CIVL(B9)/83/2023-MANAGER ESTATE (E-90722)**

28 DEC 2023

**ಸುತ್ತೋಲೆ**

**ವಿಷಯ:** ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಣಿಯಾದ ರಿಗ್ ಸಂಸ್ಥೆಗಳಿಗೆ / ಮಾಲೀಕರಿಗೆ ಮಾತ್ರ ಕೊಳವೆ ಬಾವಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:** ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಅಂತರ್ಜಲ ಪ್ರಾಧಿಕಾರ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: KGWA/GW/NOC/05/2022-23/1739 ದಿನಾಂಕ 24/11/2023.

****************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆ/ನಿಗಮ/ಮಂಡಳಿಗಳಿಂದ ಕೊಳವೆ ಬಾವಿ ಕೊರೆಯುವ ಕಾರ್ಯಕ್ರಮದ ಟೆಂಡರ್ ಪ್ರಕ್ರಿಯೆಯಲ್ಲಿ ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸದೆ ಇರುವ ಸಂಸ್ಥೆಗಳ/ ಮಾಲೀಕರನ್ನು ಟೆಂಡರ್‌ನಲ್ಲಿ ಪರಿಗಣಿಸದಿರುವುದು ಹಾಗೂ ನಮೂನೆ-7ಎ ಹೊಂದಿದವರಿಗೆ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡುವ ಸಂಬಂಧ ಉಲ್ಲೇಖದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಸದರಿ ಸುತ್ತೋಲೆಯನ್ನು ಇದರೊಂದಿಗೆ ಲಗತ್ತಿಸುತ್ತಾ, ನಿಗಮದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ಕೊಳವೆ ಬಾವಿ ನಿರ್ಮಾಣ ಕಾಮಗಾರಿಗಳಲ್ಲಿ ಸದರಿ ಸುತ್ತೋಲೆಯನ್ವಯ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರ್‌ಗಳು (ವಿ),ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ (ಸಿವಿಲ್),ಕವಿಪ್ರನಿನಿ.
5. ಅಧೀಕ್ಷಕ ಇಂಜಿನಿಯರ್ (ವಿ) (ಐ.ಟಿ ) ಕವಿಪ್ರನಿನಿ ಕಾವೇರಿ ಭವನ, ಬೆಂಗಳೂರು-ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸುವುದು.
6. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು (ವಿ)/(ಸಿವಿಲ್) ,ಕವಿಪ್ರನಿನಿ.
8. ಎಲ್ಲಾ ಉಪ-ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.
10. ಲೆಕ್ಕಾಧಿಕಾರಿ (ಕೋಡಿಫಿಕೇಶನ್), ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು( ಹಣಕಾಸು)/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳು ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಬೆಂಗಳೂರು.

ಕರ್ನಾಟಕ ಸರ್ಕಾರ

ಸಂಖ್ಯೆ:KGWA/GW/NOC/05/2023-24 | 1739

ನಿರ್ದೇಶಕರ ಕಛೇರಿ,
ಅಂತರ್ಜಲ ನಿರ್ದೇಶನಾಲಯ ಹಾಗೂ,
ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ಅಂತರ್ಜಲ ಪ್ರಾಧಿಕಾರ,
2ನೇ ಮಹಡಿ, ಕೆ.ಎಸ್.ಎಫ್.ಸಿ ಭವನ,
#1/1, ತಿಮ್ಮಯ್ಯ ರಸ್ತೆ, ಬೆಂಗಳೂರು-52,
ದಿನಾಂಕ: 24.11.2023.
ಇ-ಮೇಲ್: gwdkar@gmail.com
ಫೋನ್ ನಂ: 080-22268732.

M.D.
04 DEC 2023
KPTCL

ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು
ಪ್ರನ (ಕಾಂ)
ಅಇಂ (ಐಟಿ ಮತ್ತು ಎಂಐಎಸ್.
ಉಪ್ರನ (ಅಡಿಟ್ ಮತ್ತು ವಿಚಾರಣೆ)
ಉಪ್ರನ (ಪ್ರಾಜೆಕ್ಟ್)
ಉಪ್ರನ (ಸಿವಿಲ್)
ಆಪ್ತ ಕಾರ್ಯದರ್ಶಿ

## ಸುತ್ತೋಲೆ

ವಿಷಯ: ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಣಿಯಾದ ರಿಗ್ ಸಂಸ್ಥೆಗಳಿಗೆ / ಮಾಲೀಕರಿಗೆ ಮಾತ್ರ ಕೊಳವೆ ಬಾವಿ ಕೊರೆಯುವ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಕ.ಅಂ.ಪ್ರಾ/ಕೊ.ಯಂ.ನೋಂ-6/2016-17 ದಿನಾಂಕ:09.08.2016.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಅಂತರ್ಜಲದ ಅತಿಬಳಕೆಯನ್ನು ನಿಯಂತ್ರಿಸಿ ಅಂತರ್ಜಲ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 ಮತ್ತು ನಿಯಮಾವಳಿ 2012ನ್ನು ಸರ್ಕಾರವು ಜಾರಿಗೆ ತಂದಿರುತ್ತದೆ.

ಸದರಿ ಅಧಿನಿಯಮದ ಪ್ರಕರಣ 13 ರಂತೆ ರಾಜ್ಯದಲ್ಲಿ ಕೊಳವೆ ಬಾವಿ ಕೊರೆಯುವ ಕಾರ್ಯ ನಿರ್ವಹಿಸುವ ರಿಗ್ ಸಂಸ್ಥೆ/ ಮಾಲೀಕರು ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಿ ನಮೂನೆ-7ಎ ಪಡೆಯುವುದು ಕಡ್ಡಾಯವಾಗಿರುತ್ತದೆ. ನಮೂನೆ-7ಎ ಹೊಂದಿರದ ರಿಗ್ ಯಂತ್ರಗಳು ವಿವಿಧ ಇಲಾಖೆಗಳಲ್ಲಿ ಟೆಂಡರ್‌ನ ಮೂಲಕ ಕೊಳವೆ ಬಾವಿ ಕೊರೆಯುವ ಕಾರ್ಯದಲ್ಲಿ ನಿರತರಾಗಿರುವುದು ಕಾನೂನಿನ ಉಲ್ಲಂಘನೆಯಾಗಿರುತ್ತದೆ.

ಸರ್ಕಾರದ ವಿವಿಧ ಇಲಾಖೆಗಳ ಮೂಲಕ ಮತ್ತು ವಿವಿಧ ಯೋಜನೆಯಡಿ ಹಮ್ಮಿಕೊಳ್ಳಲಾದ ಕೊಳವೆ ಬಾವಿ ಕೊರೆಯಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು ಕರೆಯಲಾಗುವ ಟೆಂಡರ್‌ಗಳಲ್ಲಿ ಭಾಗವಹಿಸುವ ಟೆಂಡರ್ ದಾರರು ಕಡ್ಡಾಯವಾಗಿ ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಣಿಗೊಂಡು ಮಾನ್ಯ ಇರುವ ನಮೂನೆ-7ಎ ಹೊಂದಿರಬೇಕಾಗಿರುತ್ತದೆ. ಆದ್ಯಾಗ್ಯೂ ನಮೂನೆ-7ಎ ಹೊಂದಿಲ್ಲದ ಇರುವ ರಿಗ್ ಯಂತ್ರಗಳನ್ನು ಹೊಂದಿರುವ ಸಂಸ್ಥೆಗಳು / ಮಾಲೀಕರಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತಿರುವುದು ಹಾಗೂ ಅಂತಹ ಟೆಂಡರ್‌ದಾರರಿಗೆ ಕೊಳವೆ ಬಾವಿ ಕೊರೆಯುವ ಟೆಂಡರ್ ನೀಡುತ್ತಿರುವುದು ಕರ್ನಾಟಕ ಅಂತರ್ಜಲ ಅಧಿನಿಯಮ 2011 ಪ್ರಕರಣ 13 ರ ಉಲ್ಲಂಘನೆಯಾಗಿರುತ್ತದೆ.

ಇಂತಹ ಅನಧಿಕೃತ ರಿಗ್ ಯಂತ್ರಗಳಿಗೆ ಸಹಕಾರ ನೀಡಿದಲ್ಲಿ ವಿವೇಚನಾರಹಿತವಾಗಿ ಅನಧಿಕೃತ ಕೊಳವೆ ಬಾವಿಗಳ ನಿರ್ಮಾಣ ಹೆಚ್ಚಾಗುತ್ತದೆ ಹಾಗೂ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಮುಂದುವರೆದು ಅನಧಿಕೃತ ರಿಗ್‌ಗಳಿಂದ ಕೊರದ ಕೊಳವೆ ಬಾವಿಗಳು ವಿಫಲವಾದಲ್ಲಿ, ಅಂತಹ ವಿಫಲ ಕೊಳವೆ ಬಾವಿಗಳಲ್ಲಿ ಮಕ್ಕಳು ಬಿದ್ದು ಅವಘಡಗಳು ಸಂಭವಿಸುತ್ತಿರುವುದು ತಮಗೆ ತಿಳಿದಿರುವ ವಿಷಯವಾಗಿದೆ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲದಲ್ಲಿ ಉಲ್ಲೇಖಿತ ವಿಷಯದ ಮೇಲೆ WP 38276/14 (PIL) ರಲ್ಲಿ ದಾಖಲಾಗಿದ್ದು, ಅಂತಿಮ ಆದೇಶ ದಿನಾಂಕ:19.01.2015 ರಂತೆ ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯದ ವ್ಯಾಪ್ತಿಯಲ್ಲಿ ಕೊರೆಯುವ ಸಫಲ ಮತ್ತು ವಿಫಲ ಕೊಳವೆ ಬಾವಿಗಳ ಬಗ್ಗೆ ವರದಿಯನ್ನು ಕರ್ನಾಟಕ ಲೀಗಲ್ ಸರ್ವೀಸ್‌ಸ ಪ್ರಾಧಿಕಾರ ಇವರಿಗೆ ಒದಗಿಸಲು ಸೂಚಿಸಿದ್ದೆ, ಅನಧಿಕೃತವಾಗಿ ಕೊಳವೆ ಬಾವಿ ನಿರ್ಮಾಣಗೊಂಡಲ್ಲಿ ಸರಿಯಾದ ಮಾಹಿತಿ ಸಿಗುವುದಿಲ್ಲ ಮತ್ತು ಅಧಿಕೃತ ನಮೂನೆ-7ಎ ಹೊಂದಿರುವವರಿಗೆ ಸಹ ಟೆಂಡರ್ ಹಂಚಿಕೆ ದೊರೆಯದೆ ಅವಕಾಶ ವಂಚಿತರಾಗುತ್ತಾರೆ. ನಮೂನೆ-7ಎ ಹೊಂದಿರದ ಟೆಂಡರ್‌ದಾರರಿಗೆ ಟೆಂಡರ್ ಹಂಚಿಕೆ ಮಾಡುತ್ತಿರುವುದು ನೇರವಾಗಿ ಅನಧಿಕೃತ ರಿಗ್ ಯಂತ್ರಗಳಿಗೆ ಸಹಕಾರ ನೀಡಿದಂತಾಗುವುದು. ಹಾಗೂ ಸರ್ಕಾರವು ಜಾರಿಗೆ ತಂದಿರುವ ಕರ್ನಾಟಕ ಅಂತರ್ಜಲ ಅಧಿನಿಯಮ 2011ರ ಉದ್ದೇಶವು ಫಲಿಸುವುದಿಲ್ಲ. ಈ ಕುರಿತು ಈಗಾಗಲೇ ಉಲ್ಲೇಖ(1)ರಲ್ಲಿ ಸುತ್ತೋಲೆ ನೀಡಲಾಗಿರುತ್ತದೆ. ಪ್ರಸ್ತುತ ರಿಗ್ ನೋಂದಣಿ (ನಮೂನೆ-7ಎ) ವಿವರವು https://antharjala.karnataka.gov.in/ ರ ಇಲಾಖಾ ದಾಖಲೆಗಳಡಿಯಲ್ಲಿ ಲಭ್ಯವಿರುತ್ತದೆ.

ಆದ್ದರಿಂದ ಈ ಮೇಲೆ ವಿವರಿಸಿದ ಎಲ್ಲಾ ಹಿನ್ನಲೆಯಲ್ಲಿ ತಮ್ಮ ಇಲಾಖೆ / ನಿಗಮ/ ಮಂಡಳಿಗಳಿಂದ ಕೊಳವೆ ಬಾವಿ ಕೊರೆಯುವ ಕಾರ್ಯಕ್ರಮದ ಟೆಂಡರ್ ಪ್ರಕ್ರಿಯೆಯಲ್ಲಿ ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸದೆ ಇರುವ ಸಂಸ್ಥೆಗಳ / ಮಾಲೀಕರನ್ನು ಟೆಂಡರ್‌ನಲ್ಲಿ ಪರಿಗಣಿಸದಿರುವುದು ಹಾಗೂ ನಮೂನೆ-7ಎ ಹೊಂದಿದವರಿಗೆ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡುವಂತೆ ತಮ್ಮ ಅಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಈ ಮೂಲಕ ಕೋರಿದೆ.

ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ಅಂತರ್ಜಲ ಪ್ರಾಧಿಕಾರ,
ಬೆಂಗಳೂರು.

ಇವರಿಗೆ

1. ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಕೆ.ಹೆಚ್.ಬಿ ಭವನ, ಬೆಂಗಳೂರು-01.
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಕೆ.ಎಸ್.ಎಸ್.ಐ.ಡಿ.ಸಿ ಕಟ್ಟಡ, ರಾಜಾಜಿನಗರ, ಬೆಂಗಳೂರು.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಎಂ.ಎಸ್. ಕಟ್ಟಡ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ವಿ.ವಿ.ಟವರ್, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಜಲಭವನ, ಜಯನಗರ ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ಲಿಮಿಟೆಡ್ (ಕೆ.ಬಿ.ಜೆ.ಎನ್.ಎಲ್), ಕಾಫಿ ಬೋರ್ಡ್, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಕೆ.ಆರ್.ಸರ್ಕಲ್, ಬೆಂಗಳೂರು.

10. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.

11. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲನಿಗಮ, ನೀರಾವರಿ ನಿಗಮ, ಬೆಂಗಳೂರು.

12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ, ಬೆಂಗಳೂರು.

13. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ, ಶಾಂತಿನಗರ, ಬೆಂಗಳೂರು.

14. ವ್ಯವಸ್ಥಾಪಕ ನಿರ್ದೇಶಕರು. ಕೆ.ಪಿ.ಟಿ.ಸಿ.ಎಲ್, ಖನಿಜ ಭವನ, ಬೆಂಗಳೂರು.

15. ವ್ಯವಸ್ಥಾಪಕ ನಿರ್ದೇಶಕರು, ಕೆ.ಐ.ಎ.ಡಿ.ಬಿ., ಖನಿಜ ಭವನ ಬೆಂಗಳೂರು.

16. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.

17. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಟವರ್, ಬೆಂಗಳೂರು.

18. ಪ್ರಧಾನ ಇಂಜಿನಿಯರ್, ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಕಾವೇರಿ ಭವನ ಬೆಂಗಳೂರು.

19. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರವಲಯ, ವಿಜಯಪುರ / ದಕ್ಷಿಣ ವಲಯ ಬೆಂಗಳೂರು.